# ಮಾಸ ಭವಿಷ್ಯ

-ಅರುಣ ಪಿ. ಭಟ್



**ಮೇಷ:** ಉದ್ಯೋಗಿಗಳಿಗೆ ಕೆಲಸದ ಸ್ಥಳದಲ್ಲಿ ಉತ್ತಮ ಸ್ಥಾನ ದೊರೆಯಲಿದ್ದು, ಹಿರಿಯ ಅಧಿಕಾರಿಗಳು ಮತ್ತು ಸಹೋದ್ಯೋಗಿಗಳಿಗೆ ಸಂತೋಷವಾಗಲಿದೆ. ವ್ಯಾಪಾರಿಗಳಿಗೆ ಅಲ್ಪಹಾನಿ. ಚಿಕ್ಕ ಪ್ರವಾಸದಿಂದ ಸಂತಸ. ಭೂವ್ಯವಹಾರಕ್ಕೆ, ವಿದ್ಯಾರ್ಥಿಗಳಿಗೆ ಉತ್ತಮ ಸಮಯ. ಶುಭ: 12,16,21. ಅಶುಭ: 15,19,23.



**ವೃಷಭ:** ಬಹುದಿನಗಳ ಗೃಹ ಕಲಹಕ್ಕೆ ಮುಕ್ತಿ. ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಯಶ. ಸರ್ಕಾರಿ ನೌಕರಸ್ಥರಿಗೆ ಪದೋನ್ನತಿ, ಇಚ್ಛಿತ ಸ್ಥಳಕ್ಕೆ ಬದಲಾವಣೆ. ಬೇರೊಬ್ಬರು ನೀಡಿದ ವಸ್ತು, ಹಣವನ್ನು ನೀವು ಕಳೆದುಕೊಳ್ಳುವ ಅವಕಾಶ ಇದ್ದು, ಅಂಥ ಜವಾಬ್ದಾರಿ ವಹಿಸಿಕೊಳ್ಳಬೇಡಿ. ಶುಭ: 14,19,24. ಅಶುಭ: 13,22,26.



**ಮಿಥುನ:** ತಿಂಗಳ ಮೊದಲಾರ್ಧದಲ್ಲಿ ಗ್ರಹಗತಿಗಳು ಅನುಕೂಲಕರವಾಗಿದ್ದು, ಮುಖ್ಯವಾದ ಕೆಲಸಗಳನ್ನು ಮಾಡಿಕೊಳ್ಳಿ. ಮಕ್ಕಳನ್ನು ಸರಿಪಡಿಸಲು ಯೋಜನೆ ರೂಪಿಸಬೇಕಾದ ಅನಿವಾರ್ಯತೆ ಬರಲಿದೆ. ಉದ್ಯೋಗ ಸ್ಥಳದಲ್ಲಿ ಗೌರವ ಹೆಚ್ಚುವ ಸಾಧ್ಯತೆ. ಶುಭ: 18,21,23. ಅಶುಭ: 16,22,24.



**ಕರ್ಕ:** ಮನೆಕಟ್ಟುವ ಸಮಸ್ಯೆ ಪರಿಹಾರ. ಕ್ರಯ–ವಿಕ್ರಯದಲ್ಲಿ ವಂಚನೆ ನಡೆಯುವ ಸಾಧ್ಯತೆ. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು. ಶಾರೀರಿಕ ಮತ್ತು ಮಾನಸಿಕ ಉತ್ಸಾಹ ವೃದ್ಧಿ. ಸರ್ಕಾರಿ ಕೆಲಸಗಳು ತ್ವರಿತಗತಿಯಲ್ಲಿ ನಡೆಯುವುದು. ಪರಿಚಿತ ಸ್ತ್ರೀ ವಿರೋಧ ಕಾಣಿಸುವುದು. ಶುಭ: 16,18,23. ಅಶುಭ: 15,22,27.



**ಸಿಂಹ:** ಮುಖ್ಯ ಕೆಲಸವನ್ನು ನೀವು ಮರೆತುಬಿಡಬಹುದು, ಆದಷ್ಟು ಕೆಲಸಗಳ ಬಗ್ಗೆ ಮುತುವರ್ಜಿವಹಿಸಿ. ನಿಮ್ಮ ವರ್ಚಸ್ಸು ಹಾಳು ಮಾಡಲು ವಿರೋಧಿಗಳು ಪ್ರಯತ್ನಪಡುತ್ತಾರೆ. ಎಚ್ಚರ ವಹಿಸಿ. ಸಾಮಾಜಿಕ, ರಾಜಕೀಯ ಬದುಕಿನಲ್ಲಿ ಹುದ್ದೆ, ಘನತೆ ಹೆಚ್ಚಳ ಆಗಲಿದೆ. ಶುಭ: 14,22,29. ಅಶುಭ: 16,19,27.



**ಕನ್ಯಾ:** ವೈಯಕ್ತಿಕ ಹಾಗೂ ವೃತ್ತಿಪರ ಬದುಕಿನಲ್ಲಿ ಲಾಭ ಹಾಗೂ ಮಹತ್ತರವಾದ ಪ್ರಗತಿ ಕಾಣುವ ಯೋಗ ಇದೆ. ಸಿನಿಮಾ, ವೈದ್ಯಕೀಯ, ಕಲೆ ಈ ರೀತಿಯ ವೃತ್ತಿಯಲ್ಲಿರುವವರಿಗೆ ಅತ್ಯುತ್ತಮವಾದ ಲಾಭ ಇದೆ. ಆರೋಗ್ಯವು ಚೆನ್ನಾಗಿರುತ್ತದೆ. ಶುಭ: 14,18,22. ಅಶುಭ. 17,23,29.



**ತುಲಾ:** ಶೈಕ್ಷಣಿಕ ಕ್ಷೇತ್ರದಲ್ಲಿರುವವರಿಗೆ ತಿಂಗಳ ಆರಂಭದಲ್ಲಿ ಅದ್ಭುತವಾದ ಯಶಸ್ಸಿನ ಅವಕಾಶಗಳಿವೆ. ಕ್ರೀಡೆ, ಸಿನಿಮಾ ಸಂಗೀತ ಕ್ಷೇತ್ರದವರಿಗೆ ಗೌರವದ ಸ್ಥಾನಮಾನ ದೊರೆಯಲಿದೆ. ಆದಾಯ ಮೂಲಗಳಿಂದ ಲಾಭ ಸಾಧ್ಯತೆ. ಶುಭ: 10,16,23. ಅಶುಭ: 11,18,27.



**ವೃಶ್ಚಿಕ:** ನಿಮ್ಮ ಕಾರ್ಯಗಳನ್ನು ಈ ಹಿಂದೆಂದಿಗಿಂತಲೂ ವೇಗವಾಗಿ ಮಾಡಲಿದ್ದೀರಿ. ನಿಮ್ಮ ಮನಸಿನ ವಿಚಾರವನ್ನು ನೇರವಾಗಿ ಹೇಳಲು ಪ್ರಯತ್ನಿಸಿ. ಉದ್ಯೋಗದ ಕಡೆಗೆ ನಿಮ್ಮ ಗಮನ ಹೆಚ್ಚಾಗುತ್ತದೆ. ತಿಂಗಳ ಮಧ್ಯಭಾಗದಿಂದ ನಿಮ್ಮ ಆರೋಗ್ಯ ಉತ್ತಮವಾಗಿರುತ್ತದೆ. ಶುಭ: 14,16,22. ಅಶುಭ: 7,11,26.



**ಧನು:** ವೃತ್ತಿಪರ ಜೀವನದಲ್ಲಿ ಸ್ವಚ್ಛ ವ್ಯಕ್ತಿತ್ವ ಎಂಬ ಹೆಸರು ಪಡೆಯಲಿದ್ದೀರಿ. ನಿಮ್ಮ ಈ ಪ್ರಯತ್ನದಲ್ಲಿ ಯಶಸ್ಸು ಪಡೆಯಲು ಅವಕಾಶಗಳು ದೊರೆಯಲಿವೆ. ಸ್ಥಿರತೆ, ದೃಢತೆ ಕಾಪಾಡಿಕೊಂಡು ಪ್ರಗತಿಯತ್ತ ಹೆಜ್ಜೆ ಇಡುತ್ತೀರಿ. ಅಪಾಯಗಳಿಂದ ತಪ್ಪಿಸಿಕೊಳ್ಳಲು ದೈವ ಬಲವಿದೆ. ಶುಭ: 9,14,25. ಅಶುಭ: 17,23,28.



**ಮಕರ:** ಆದಾಯ ಮೂಲಗಳಿಂದ ಉತ್ತಮ ಲಾಭ ಪಡೆಯುವ ಅವಕಾಶ ಇದೆ. ನಿಮ್ಮ ಮಗ ಅಥವಾ ಮಗಳ ಮದುವೆಯ ವಿಚಾರವನ್ನು ಅಂತಿಮಗೊಳಿಸುವ ಅವಕಾಶವಿದೆ. ಸ್ಪರ್ಧೆ, ಕ್ರೀಡಾ ಕ್ಷೇತ್ರದಲ್ಲಿರುವವರಿಗೆ ಅತ್ಯುತ್ತಮ ಸಾಧನೆ ಮಾಡಲು ಅವಕಾಶ ದೊರೆಯಲಿದೆ. ಶುಭ: 11,14,25. ಅಶುಭ: 15,26,29.



**ಕುಂಭ:** ತಿಂಗಳ ಶುರುವಿನಿಂದಲೇ ಉದ್ಯೋಗ ಕ್ಷೇತ್ರದಲ್ಲಿ ಅದ್ಭುತ ಸಾಧನೆಯ ಅವಕಾಶಗಳಿವೆ. ನಿಮ್ಮ ಆದಾಯ ಉತ್ತಮವಾಗಿರುತ್ತದೆ. ಸಾಮಾಜಿಕವಾಗಿ ಮನ್ನಣೆ ಪಡೆಯಲಿದ್ದೀರಿ. ಮಕ್ಕಳ ಪ್ರಗತಿಯಿಂದ ಸಮಾಧಾನ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ನಿರೀಕ್ಷಿತ ಯಶಸ್ಸು. ಶುಭ: 12,20,28. ಅಶುಭ: 10,18,27.



**ಮೀನ:** ಸಣ್ಣ ಪ್ರವಾಸ ಸಾಧ್ಯತೆ. ಸಂಸ್ಥೆಯೊಂದರ ಜತೆ ಮಹತ್ತರ ಒಪ್ಪಂದವೊಂದಕ್ಕೆ ಸಹಿ ಹಾಕುವ ಸಾಧ್ಯತೆ ಇದೆ. ಆದಾಯದಲ್ಲಿ ಹೆಚ್ಚಳ ಆಗುತ್ತದೆ. ಇದರಿಂದ ಸಾಮಾಜಿಕ, ಆರ್ಥಿಕ ಸ್ಥಾನಮಾನ ಹೆಚ್ಚಾಗಲಿದೆ. ವೈಯಕ್ತಿಕ ಸಂಬಂಧದಲ್ಲಿ ಮಧುರವಾದ ಕ್ಷಣಗಳನ್ನು ಅನುಭವಿಸಲಿದ್ದೀರಿ. ಶುಭ: 8,16,22. ಅಶುಭ: 12,24,29.